ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ಸಂಪನ್ಮೂಲಗಳೆಲ್ಲಾ ಇದೆ. ಕೋರ್ಟನ ಬಿಲ್ಡಿಂಗ್ ಇದೆ. ರೆವಿನ್ಯೂ ಸಬ್ ಡಿವಿಜನ್, ಭೂಮಾಪನ ಸಬ್ ಡಿವಿಜನ್‌ಗಳು ಇದೆ.

ಅಧ್ಯಕ್ಷರು : ಅದಕ್ಕೂ ಮೊದಲು ಹೈಕೋರ್ಟ್‌ನ ಪ್ರಸ್ತಾವನೆ ಬರಬೇಕು ಎಂದು ಹೇಳುತ್ತಾರೆ. ಅದು ಪ್ರೊಸೀಜರ್.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು : ಬರುತ್ತದೆ.

ಅಧ್ಯಕ್ಷರು : ಬರುತ್ತಿದೆಯೇ? ಬಂದಮೇಲೆ ಸಂಪನ್ಮೂಲ ಸಿಗುತ್ತದೆ. ಹೈಕೋರ್ಟ್‌ನಿಂದ ಪ್ರಸ್ತಾವನೆ ಬಂದ ಮೇಲೆ ತಾನೇ ಸಂಪನ್ಮೂಲದ ವಿಚಾರ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು : ಸಂಪನ್ಮೂಲ ಏನೂ ಇಲ್ಲಿ ಬೇಕಾಗಿಲ್ಲ, ಬೀದರ್‌ನಿಂದ ಶಿಫ್ಟ್ ಮಾಡಿದರೆ ಸಾಕು.

ಅಧ್ಯಕ್ಷರು : ಹಾಗಾದರೆ ನಿಮ್ಮ ಕೆಲಸ ಸುಲಭವಾಯಿತು.

ಖಾಸಗಿಯವರಿಗೆ ವಾಹನಗಳನ್ನು ಓಡಿಸಲು ಅನುಮತಿ.

413 : ಶ್ರೀ ಎಂ.ವಿ. ವೆಂಕಟಪ್ಪ, (ಮುಳಬಾಗಿಲು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜನತೆಯ ಅನುಕೂಲಕ್ಕಾಗಿ ಸಾರಿಗೆ ವಾಹನಗಳ ರಹದಾರಿಗಳನ್ನು ಖಾಸಗೀಯವರಿಗೆ ಕೊಡುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಆ ಯೋಜನೆಯ ರೂಪರೇಖೆಗಳೇನು?

ಇ) ಖಾಸಗೀಯವರು ಸಾರಿಗೆ ರಹದಾರಿಗಳನ್ನು ಕೊಟ್ಟರೆ ನಡೆಸುತ್ತೇವೆಂದು ಮುಂದೆ ಬಂದಿದ್ದಾರೆಯೇ?

ಈ) ಜನತೆಗೆ ಉತ್ತಮ ಸಾರಿಗೆ ವ್ಯವಸ್ಥೆ ಏರ್ಪಡಿಸಲು ಈಗಿರುವ ವಾಹನಗಳಿಗಿಂತ ಹೆಚ್ಚಾಗಿ ಎಷ್ಟು ವಾಹನಗಳು ಬೇಕಾಗಬಹುದು?

ಉ) ಅದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಪ್ರಶ್ನೆ ಅಪಕ್ವವಾಗಿದೆ.

ಆ) ಇದು ಇನ್ನೂ ಪ್ರಾರಂಭಿಕ ಹಂತದಲ್ಲಿದೆ.

ಇ) ಅನೇಕ ನಿರ್ವಾಹಕರು ಮುಂದೆ ಬಂದಿದ್ದಾರೆ.

ಈ) ಸುಮಾರು 2000 ಹೆಚ್ಚುವರಿ ಬಸ್ಸುಗಳು ಬೇಕಾಗಿದ್ದು ಅವುಗಳಲ್ಲಿ 558 ಬಸ್ಸುಗಳನ್ನು ಮಾರ್ಚ್ 1992ರಲ್ಲಿ ಮತ್ತು 800 ಬಸ್ಸುಗಳನ್ನು 92-93 ವರ್ಷದಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ. 2000 ಹೆಚ್ಚುವರಿ ಬಸ್ಸುಗಳಿಗೆ ಮತ್ತು ಡಿಪೋಗಳಿಗೆ ಸುಮಾರು 130 ಕೋಟಿ ರೂ.ಗಳಷ್ಟು.

ಶ್ರೀ ಎಂ.ವಿ. ವೆಂಕಟಪ್ಪ : ಸ್ವಾಮಿ ತಮ್ಮ ಉತ್ತರದಲ್ಲಿ ಸುಮಾರು ಎರಡು ಸಾವಿರ ಬಸ್‌ಗಳು ಹೆಚ್ಚಿಗೆ ಬೇಕು ಎಂದು ಹೇಳಿದ್ದೀರಿ. ಮಾರ್ಚಿ ತಿಂಗಳಲ್ಲಿ 558 ಬಸ್‌ಗಳ ಪ್ರಾರಂಭವಾಗುತ್ತಿವೆ. ಅಲ್ಲಿಗೆ ಇನ್ನು 1500 ಬಸ್‌ಗಳು ಬೇಕು. 1500 ಬಸ್‌ಗಳಿಗೆ 130 ಕೋಟಿ ರೂಪಾಯಿಗಳು ಬೇಕಾಗುತ್ತದೆ. 130 ಕೋಟಿ ರೂಪಾಯಿಗಳು ತಮ್ಮಲ್ಲಿ ರಿಸೋರ್‌ಸಸ್ ಇದೆಯೇ? ಇಲ್ಲದಿದ್ದರೆ ಒಂದು

ವರ್ಷವೋ, ಎರಡು ವರ್ಷವೋ ಅಥವಾ ಮೂರು ವರ್ಷವೋ ನೀವು ಪ್ರೈವೇಟ್‌ನವರಿಗೆ ಕೊಡುವುದಕ್ಕೆ ಏತಕ್ಕೆ ಆಫರ್ ಮಾಡಬಾರದು? ಇದು ಇನ್ನು ಪ್ರಾರಂಭಿಕ ಹಂತದಲ್ಲಿದೆ, ಪ್ರಿಲಿಮಿನರಿ ಸ್ಟೇಜ್‌ನಲ್ಲಿದೆ ಎಂದು ಹೇಳಿದ್ದೀರಿ. ತಮಗೆ ಏನು ಡಿಫಿಕಲ್ಟೀಸ್ ಇದೆ? ಒಂದೇ ಸಲ ಫೈನಲೈಜ್ ಮಾಡಿಕೊಂಡು ಈಗ ನಿಮ್ಮ ಹತ್ತಿರ 130 ಕೋಟಿ ರೂಪಾಯಿ ಇಲ್ಲದಿದ್ದರೆ ನೀವು ಪ್ರೈವೇಟ್‌ನವರಿಗೆ ಆಲೋ ಮಾಡಿ. ಇಲ್ಲದಿದ್ದರೆ ಜನರಿಗೆ ಬಹಳ ತೊಂದರೆಯಾಗುತ್ತಿದೆ.

ಶ್ರೀ ಅಜೀಜ್ ಸೇಠ್ : ಮಾನ್ಯ ಅಧ್ಯಕ್ಷರೆ, 130 ಕೋಟಿ ರೂಪಾಯಿ ಇಲ್ಲ ಎಂದೇನೋ ಇಲ್ಲ. ನಾವು ಸಂಪೂರ್ಣವಾಗಿ ಒಂದೇ ಸಾರಿ ಕ್ಯಾಷನ್ನು ಕೊಡುತಕ್ಕಂಥ ಪ್ರಶ್ನೆ ಇಲ್ಲ. ಐಡಿಬಿಐನಿಂದ ಬೇರೆ ಬೇರೆ ಸೋರ್ಸ್‌ಸ್‌ನಿಂದ ನಮಗೆ ಲೋನ್ ಸಿಗುತ್ತದೆ. ಅದನ್ನು ತೆಗೆದುಕೊಳ್ಳುವುದಕ್ಕೆ ಏನೂ ಕಷ್ಟ ಇಲ್ಲ. ಇದಕ್ಕೂ ಪ್ರೈವೇಟೈಜೇಷನ್‌ಗೂ ಏನೂ ಸಂಬಂಧ ಇಲ್ಲ. ಪ್ರೈವೇಟೈಜೇಷನ್ ಮಾಡಬೇಕು ಎಂದು ಒಂದು ಹಂತದಲ್ಲಿ ಸರ್ಕಾರ ಯೋಚನೆಯನ್ನು ಮಾಡುತ್ತಿದೆ. ಅದನ್ನು ಮಾಡಬೇಕಾದರೆ ನಾವು ಸಂಪೂರ್ಣವಾಗಿ ಅದನ್ನೆಲ್ಲಾ ಸ್ಟಡಿ ಮಾಡಬೇಕಾಗುತ್ತದೆ. ಅದಕ್ಕೆ ಸ್ವಲ್ಪ ತಡವಾಗುತ್ತಿದೆ.

ಶ್ರೀ ಎಂ.ವಿ. ವೆಂಕಟಪ್ಪ : ಈಗ ಸಾಮಾನ್ಯವಾಗಿ ಪೀಕ್ ಅವರ್ಸ್ ಎಂದು ಇರುತ್ತದೆ. ಯಾವುದೇ ತಾಲ್ಲೂಕು ಹೆಡ್ ಕ್ವಾರ್ಟರ್‌ನಲ್ಲಾಗಲಿ, ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ನಲ್ಲಾಗಲಿ ಅದಕ್ಕೋಸ್ಕರ ನೀವು 10 ಮೈಲಿ ಎಂದರೆ 16 ಕಿಲೋ ಮೀಟರ್ಸ್ ನೀವು ನಾನ್ ಮಾನೋಪಲಿ ರೂಟ್ಸ್‌ನಲ್ಲಿ ಸಾಧ್ಯವಾದರೆ ಪ್ರೈವೇಟ್‌ನವರಿಗೆ ಹೆಚ್ಚು ಹೆಚ್ಚು ಟ್ರಿಪ್‌ಗಳನ್ನು ಕೊಡುವುದರಿಂದ ಕಾಲೇಜ್ ಅವರ್ಸ್‌ಮಾರ್ನಿಂಗ್ ಅಂಡ್ ಈವ್ನಿಂಗ್ ಇಂಥ ಪೀಕ್ ಅವರ್ಸ್‌ನಲ್ಲಿ ಹೆಚ್ಚು ಹೆಚ್ಚು ಟ್ರಿಪ್‌ಗಳನ್ನು ಓಡಿಸುವುದು ಒಂದು, ಜೊತೆಗೆ ನಾವು ಮಾನೊಪಲಿ ರೂಟ್ಸ್‌ಗಳನ್ನು ಅವರಿಗೆ ಕೊಟ್ಟು ಬಿಟ್ಟರೆ ನಿಮಗೆ ಏನೂ ತೊಂದರೆಯಾಗುವುದಿಲ್ಲ. ಈಗ ಜನಸಂಖ್ಯೆಯ ಒತ್ತಡ ಜಾಸ್ತಿಯಾಗುತ್ತಿದೆ ಬಸ್‌ಗಳು ಮೊದಲು ಎಷ್ಟಿತ್ತೋ ಅಷ್ಟೇ ಇದೆ. ಹುಡುಗರು ಜಾಸ್ತಿಯಾಗಿದ್ದಾರೆ. ಕಾಲೇಜು ಹುಡುಗರು ಜಾಸ್ತಿಯಾಗಿದ್ದಾರೆ. ಈ ಪೀಕ್ ಅವರ್ಸ್‌ನಲ್ಲಿ ಸ್ವಲ್ಪ ಮ್ಯಾನೇಜ್ ಮಾಡಿದರೆ ಅದು ಸರಿ ಹೋಗಬಹುದು ಎಂದು ನನಗನ್ನಿಸುತ್ತಿದೆ. ಈ ಪೀಕ್ ಅವರ್ಸ್ +16 ಕಿಲೋಮೀಟರ್ ಮಾನೊಪಲಿ ರೂಟ್ಸ್ ನಲ್ಲಿ ಫ್ರೀಯಾಗಿ ನಮ್ಮ ಪ್ರೈವೇಟ್‌ನವರಿಗೆ ಕೊಟ್ಟರೆ ಅನುಕೂಲವಾಗುತ್ತದೆ

ಶ್ರೀ ಅಜೀಜ್ ಸೇಠ್ : ಮಾನ್ಯ ಅಧ್ಯಕ್ಷರೆ, ನ್ಯಾಷನಲೈಸ್ ರೂಟ್‌ನಲ್ಲಿ 10-15 ಕಿ.ಮೀಟರ್ ಖಾಸಗಿಯವರಿಗೆ ಕೊಡುವ ವಿಷಯದಲ್ಲಿ ನಾನು ಒಂದೇ ಒಂದು ಮಾತನ್ನು ಹೇಳಿದೆ. ಅದೇನೆಂದರೆ Privatisation -it is premature, because I have to work out the details. For instance, KSRTC has nationalised 71.1%; that is all routes in Northern Karnataka, 8 districts and also bus routes in Hassan District. Partial nationalisation in Bangalore Urban. Bangalore Rural, Kolar. Mysore and Chickmagalur.

ಮತ್ತೆ ಕೆಲವು ಕಡೆ ನಾನ್ ನ್ಯಾಷನಲೈಸ್ಡ್‌ರೂಟ್ಸ್ ಇರುವುದರಿಂದ ಅಲ್ಲಿ ಬಸ್ಸಸ್ ಹೆಚ್ಚು ಹೆಚ್ಚು ಬೇಕೆಂದು ಡಿಮ್ಯಾಂಡ್ ಮಾಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಮಂಗಳೂರಿನಿಂದ ಉಡುಪಿಗೆ ನಮ್ಮ ಬಸ್ಸ್‌ನಲ್ಲಿ 11 ರೂಪಾಯಿ ಚಾರ್ಜ್ ಇದೆ. ಅದೇ ಪ್ರೈವೇಟ್ ಬಸ್ಸಿನಲ್ಲಿ 6 ರೂಪಾಯಿ ಇದೆ. because

of the overhead and because it is non-monoply sector. All these things will be taken into consideration. We will come back to package deal when time comes.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಂತ್ರಿಗಳು ಮಾನ್ಯ ಸದಸ್ಯರ ಪ್ರಶ್ನೆಗೆ Is there any proposal before the Government to offer some of the KSRTC routes to private operators, the answer is, the question it self is premature, ಎಂದು ಹೇಳಿದ್ದಾರೆ. ಈ ಅಧಿವೇಶನದಲ್ಲಿ ಮಾನ್ಯ ರಾಜ್ಯಪಾಲರು ನಮ್ಮನ್ನು ಉದ್ದೇಶಿಸಿ ಭಾಷಣ ಮಾಡಿರುವುದರಲ್ಲಿ ಬಹಳ ಸ್ಪೆಸಿಫಿಕ್ ಆಗಿ ಹೇಳಿದ್ದಾರೆ. Government has decided to denationalise and privatise.ಎಂದು ಸ್ಪೆಸಿಫಿಕ್ ಆಗಿ ಹೇಳಿದ್ದಾರೆ.

How can the Hon. Minister say that the questioon is premature? You must be very specific about it. You don't apply your mind on this question and you simply say it is preemature.

Mr. Speaker : Has it become mature?

SRI Azeez Sait : If my hon.friend becomes mature he can understand my reply 'premature'. I meant and said that they have not completed the formalities. We are still working it. Merely copying some States like Delhi, Madhya pradesh, I do not think it is workable. I need not go to Delhi and Madhya pradesh to learn. In Mangalore private sector buses are working accurate. What I am thinking is, how to go about. What are we to do with the 100% nationalised areeas, what are we to do with the 50% nationalised areas, what are we to do with the 25% nationalised areas. All that together I am seeing whether we could bring in healthy competition between the private sector and the public sector. So, I said, at this juncture prevails on my friend.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ರಾಜ್ಯಪಾಲರ ಭಾಷಣದ ಪ್ಯಾರಾ 12 ರಲ್ಲಿ ಹೇಳಿರುವುದನ್ನು ನಾನು ಓದುತ್ತೇನೆ. ಈಗಾಗಲೇ ನಡೆಸಲಾದ ಸಾರಿಗೆ ಸಮೀಕ್ಷೆಗಳ ಆಧಾರದಮೇಲೆ, ನಗರ ಹಾಗೂ ಗ್ರಾಮಾಂತರ ಪ್ರದೇಶಗಳಿರಡರಲ್ಲೂ ಇರುವ ಬಹಳಷ್ಟು ಮಾರ್ಗಗಳಲ್ಲಿ ಹಾಗೂ ಪ್ರದೇಶಗಳಲ್ಲಿ ಖಾಸಗಿ ವಲಯಗಳ ಕಾರ್ಯಾಚರಣೆಗೂ ಅನುಮತಿ ನೀಡಲಾಗುವೆಂದು ಹೇಳಿದ್ದಾರೆ. ಹಾಗಿದ್ದರೆ, ಈಗಾಗಲೇ ಸಮೀಕ್ಷೆ ನಡೆಸಿದ್ದರೆ ಆ ಸಮೀಕ್ಷೆ ಸರಿ ಇದೆಯೋ ಇಲ್ಲವೋ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಆದ್ದರಿಂದ ಈಗಾಗಲೇ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿದೆ. ಆದ್ದರಿಂದ ನಿರ್ದಿಷ್ಟವಾದಂತಹ ಉತ್ತರ ಕೊಡುವಂತೆ ಮಾನ್ಯ ಮಂತ್ರಿಗಳಿಗೆ ತಾವು ಆದೇಶ ನೀಡಬೇಕೆಂದು ನನ್ನ ವಿನಂತಿ.

Sri Azeez Sait : I do not deny sir. This is the thinking of the Government to allow privatisation and that is what His Excellency the

Governor in his address has spelled out. I think you must appreciate the fact that Iam working out details and it takes time.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಸುಮ್ಮನೆ ಇಲ್ಲಿ ಸಮೀಕ್ಷೆ ಮಾಡಿದ್ದೇವೆಂದು ಹೇಳಿದ್ದೀರಿ. ಎಲ್ಲಿ ಸಮೀಕ್ಷೆ ಮಾಡಿದ್ದೀರಿ? ಯಾರು ಸಮೀಕ್ಷೆ ಮಾಡಿದವರು? ಸಮೀಕ್ಷೆಯ ರಿಪೋರ್ಟ್ ಎಲ್ಲಿದೆ?

ಶ್ರೀ ಹೆಚ್. ಏಕಾಂತಯ್ಯ : ಸಮೀಕ್ಷೆ ಮಾಡದಿದ್ದರೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ ಅದು ತಪ್ಪಾಗಿರಬಹುದು. ಇಲ್ಲಿ ಮಾನ್ಯ ಮಂತ್ರಿಗಳು ಈಗ ಹೇಳುತ್ತಿರುವುದು ತಪ್ಪಾಗಿರಬೇಕಾಗಿತ್ತು. ಈಗಾಗಲೇ ಸಮೀಕ್ಷೆಯಯನ್ನು ನಡೆಸಿದ್ದೇವೆ. ನಡೆಸಿದಂತಹ ಕೆಲವು ಭಾಗಗಳಲ್ಲಿ ಮನುಮತಿ ನೀಡಲಾಗುತ್ತದೆ ಎಂಬ ಮಾತನ್ನು ಹೇಳಿದ್ದಾರೆ. ಸಮೀಕ್ಷೆ ನಡೆಸಿದ್ದರೆ. ಆ ಸಮೀಕ್ಷೆಯಲ್ಲಿ ಈ ರೂಟ್ ಸೇರಬೇಕಾಗುತ್ತದೆಂದು ಹೇಳಲಿ.

Sri V.H.Koujalagi : He says the question is premature.

Sri. D.B.Chandre Gowda : I had one thing. I thought the Hon. Minister was mature enough to understand the question itself. This is not the first time when you are referring to the denationalsation of road transport system. This was in reference to the reference made in both the budget and Governor's address of the last year. In addition to that, I think the Governor's Address is a policy document which would guide the Government for the year to come. May I know from the Hon.Minister, what is your thinking on the lines of the policy document presented to this House by the Governor; the speech is prepared by your Government can never be a premature thinking.

SRI AZEEZ SAIT : I own it. I do not disown it. I do not know why my hon. friend either he want-to pull my legs or whether I am not in a position to make them understand or whether they are in a positions to understand themselves. what I said is, the answer is premature. I did not say that the question is premature. Answer at this stage is premature because I am working at the modalities and it is an accepted fact that the Governor has spelled out the policy.

ಸಭಾಧ್ಯಕ್ಷರು : ಎರಡು ವಿಷಯಗಳು ಬಹಳ ಸ್ಪಷ್ಟವಾಗಿವೆ. ಒಂದನೆಯದು, ನೀತಿ ಘೋಷಣೆಯಾಗಿದೆ. ಆ ನೀತಿಗೆ ಇವರು ಬದ್ಧರಾಗಿದ್ದಾರೆ. ಎರಡನೆಯದಾಗಿ, ನಿಮ್ಮ ಕ್ವಶ್ಚನ್ ಪ್ರಿಮೆಚ್ಯೂರ್ ಅಲ್ಲ, ಮೆಚ್ಯೂರ್ ಎಂದು. ಅದೂ ಸ್ಪಷ್ಟವಾಗಿದೆ. ಈಗ ಆನ್ಸರ್ ಪ್ರಿಮೆಚ್ಯೂರ್ ಆಗಿದೆ. ಏಕೆಂದರೆ, I have not gone into the integrity of that."

SRI D.B. CHANDRE GOWDA: The basic question is, he is trying to introduce the element of competition in the field of transport, that is the concept of the nationalisation of the transport system.

MR. SPEAKER : Anyway, Transport demands are coming up for discussion. This can be gone at that time.

SRI AZEEZ SAIT : Mr. Sindia knows everything and yet he wants to beat..

SRI PGR SINDIA : I do not want to pull the legs of the Hon. Minister. If possible, I want to pull the legs of this Government.

MR. SPEAKER: The trouble is that there is some kind of love hate relationship between yoursly and the Hon. Minister.

ಜಿಲ್ಲಾ ಪರಿಷತ್ತುಗಳಿಂದ ನೇಮಕಗೊಂಡ ಗೌರವಾನ್ವಿತ ಶಿಕ್ಷಕರನ್ನು ಮುಂದುವರಿಸುವುದು.

436 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ(ಚಿಕ್ಕಪೇಟೆ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಲ್ಲಿಯವರೆಗೂ ಜಿಲ್ಲಾ ಪರಿಷತ್ತುಗಳ ವತಿಯಿಂದ ನೇಮಕ ಮಾಡಲಾದ ಗೌರವ ಶಿಕ್ಷಕರ ಸಂಖ್ಯೆ ಎಷ್ಟು (ಜಿಲ್ಲಾ ಪರಿಷತ್ತುವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಈ ಗೌರವ ಶಿಕ್ಷಕರುಗಳ ಸೇವೆಯನ್ನು ಮುಂದುವರಿಸಲು ಸರ್ಕಾರ ಯಾವುದಾದರೂ ನಿರ್ಧಾರವನ್ನು ಕೈಗೊಂಡಿದೆಯೇ?

ಇ) ಗೌರವ ಶಿಕ್ಷಕರನ್ನು ನೇಮಿಸುವಾಗ ಮೀಸಲಾತಿ ಪದ್ಧತಿಯನ್ನು ಅನುಸರಿಸಿಲಾಗಿದೆಯೇ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ತುಗಳ ವತಿಯಿಂದ ಈ ಕೆಳಕಂಡಂತೆ ಗೌರವ ಶಿಕ್ಷಕರುಗಳು ನೇಮಕಗೊಂಡಿರುತ್ತಾರೆ.

1.	ಬೆಂಗಳೂರು ಗ್ರಾಮಾಂತರ	1,596
2.	ಕೋಲಾರ ಜಿಲ್ಲೆ	1,021
3.	ಶಿವಮೊಗ್ಗ ಜಿಲ್ಲೆ	368
4.	ಬಳ್ಳಾರಿ ಜಿಲ್ಲೆ	850
	ಒಟ್ಟು	3,837

ಆ) ಈ ಶಿಕ್ಷಕರುಗಳು ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದಲ್ಲಿ ಸೇವೆಯನ್ನು ಕ್ರಮಬದ್ಧಗೊಳಿಸುವ ಬಗ್ಗೆ ದಾವೆಯನ್ನು ಹೂಡಿ ನ್ಯಾಯಾಲಯದಿಂದ ತೀರ್ಪು ಪಡೆದಿರುತ್ತಾರೆ.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಸಾಮಾನ್ಯವಾಗಿ ನೇಮಕಾತಿ ಮಾಡಿಕೊಳ್ಳುವಾಗ ಅವರು ಸಲ್ಲಿಸಿರುವ ಸೇವೆಗೆ ಅನುಗುಣವಾಗಿ ಒತ್ತಾಸೆ ಅಂಕಗಳನ್ನು ಕೊಟ್ಟು ಆಯ್ಕೆಗೆ ಪರಿಗಣಿಸುವ ವಿಚಾರವನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಇ) ಅನುಸರಿಸಿರುವುದಿಲ್ಲ.